ಸೃಜನಿ

SRUJANI: Indian Journal of Innovative Research and Development (SIJIRD)
Volume-4 Special Issue 1, March-April 2025, Pp. 61-66
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಬೆಳಗಾವಿ ಜಿಲ್ಲೆಯ ಪ್ರವಾಸೋದ್ಯಮದ ಕೇಂದ್ರವಾಗಿ ಗೋಕಾಕ್ ಜಲಪಾತ: ಒಂದು ಅವಲೋಕನ

**ಸೋಮನಗೌಡ[1] ಮತ್ತು ಡಾ.ಎಸ್.ನಾಗರತ್ನಮ್ಮ[2]**
[1]ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
[2]ಹಿರಿಯ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**Abstract:**
*ಕರ್ನಾಟಕದಲ್ಲಿ ಬೆಳಗಾವಿ ಜಿಲ್ಲೆಯು ಐತಿಹಾಸಿಕ, ಪ್ರಾಕೃತಿಕ, ಧಾರ್ಮಿಕ ಹಾಗೂ ಆರ್ಥಿಕವಾಗಿ ಮಹತ್ತರ ಪಾತ್ರವನ್ನು ಹೊಂದಿದೆ. ಆದ್ದರಿಂದ ಭಾರತವನ್ನು ಬ್ರಿಟಿಷರ ಕಪಿಮುಷ್ಠಿಯಿಂದ ಮುಕ್ತಿ ಕೊಡಿಸುವ ಹಂಬಲದ ಮೇರೆಗೆ ಅನೇಕ ದೇಶೀಯ ಜನರನ್ನು ಒಗ್ಗೂಡಿಸಿ, ತಮ್ಮ ಬಲಿಷ್ಠತೆ, ಧೈರ್ಯ, ತ್ಯಾಗ, ಬಲಿದಾನದಂತಹ ಮಹತ್ಕಾರ್ಯದಲ್ಲಿ ನಿರತರಾದವರಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲವನ್ನು ನೀಡಿದೆ. ಹಾಗೆಯೇ 1924 ರಂದು ಭಾರತದ ರಾಷ್ಟ್ರೀಯ ಕಾಂಗ್ರೆಸ್ ಸಮ್ಮೇಳನವನ್ನು ಬೆಳಗಾವಿಯಲ್ಲಿ ಹಮ್ಮಿಕೊಂಡಿದ್ದು, ಈ ಅಧಿವೇಶನದ ಅಧ್ಯಕ್ಷತೆಯನ್ನು ಮಹಾತ್ಮ ಗಾಂಧೀಜಿಯವರು ವಹಿಸಿಕೊಂಡಿದ್ದ ಮೊದಲ ಮತ್ತು ಕೊನೆಯ ಸಮ್ಮೇಳನವಾಗಿದೆ . ಅದರಂತೆ ಬೆಳಗಾವಿಯಲ್ಲಿ ಗಾಂಧೀಜಿ ಮತ್ತು ತಿಲಕ್‌ರವರ ಅನೇಕ ರಚನಾತ್ಮಕ ಕಾರ್ಯಗಳಿಗೆ ಚಾಲನೆ ನೀಡಿ ಹಾಗೂ ಉದಯಿಸಿದ ಚಳುವಳಿಗಳಿಗೆ ಸಹಕಾರ ಸಹಾನುಭೂತಿ ಪ್ರೋತ್ಸಾಹವನ್ನು ನೀಡುತ್ತಾ ದೇಶಾಭಿಮಾನವನ್ನು ಹೆಮ್ಮೆಯಿಂದ ತೋರ್ಪಡಿಸಿಕೊಳ್ಳುತ್ತಿದ್ದರು. ದೇಶದ ಸ್ವಾತಂತ್ರ ಹೋರಾಟದಲ್ಲಿ ಭಾಗವಹಿಸಿದ ಜನರಲ್ಲಿ ಬೆಳಗಾವಿ ಜಿಲ್ಲೆಯ ಜನತೆಯ ಪ್ರಾಮುಖ್ಯತೆ ಕಾಣಬಹುದಾಗಿದೆ. ಪ್ರಸ್ತುತ ಲೇಖನದಲ್ಲಿ ಬೆಳಗಾವಿ ಜಿಲ್ಲೆಯ ಗೋಕಾಕ್ ಜಲಪಾತದ ಬಗ್ಗೆ ಐತಿಹಾಸಿಕ ದೃಷ್ಟಿಕೋನದಿಂದ ಅಧ್ಯಯನ ಮಾಡಲಾಗಿದೆ.*

**Keywords:** *ಕರ್ನಾಟಕ ಇತಿಹಾಸ, ಬೆಳಗಾವಿ, ಗೋಕಾಕ್ ಜಲಪಾತ, ಪ್ರವಾಸೋದ್ಯಮ.*

## ಪೀಠಿಕೆ

ಬೆಳಗಾವಿ ಜಿಲ್ಲೆಯು ಕೇವಲ ಸ್ವಾತಂತ್ರ್ಯ ಹೋರಾಟಕ್ಕೆ ಮಾತ್ರ ಸೀಮಿತವಾಗಿರದೆ, ಐತಿಹಾಸಿ ಪ್ರವಾಸಿ ಸ್ಮಾರಕಗಳಾದ ಕೋಟೆ–ಕೊತ್ತಲುಗಳು, ದೇವಾಲಯಗಳು, ಶಾಸನಗಳು ಹಾಗೆಯೇ ಅನೇಕ ನೈಸರ್ಗಿಕ ಪ್ರವಾಸಿ ಹಾಗೂ ಆಕರ್ಷಣೀಯ ತಾಣಗಳಾದ ಬೆಟ್ಟಗಳು, ಕೃಷ್ಣ, ಘಟಪ್ರಭಾ, ಮಲಪ್ರಭಾ ನದಿಗಳಿಂದ ಉದ್ಭವಿಸಿರುವ ಜಲಪಾತಗಳನ್ನು ಹೊಂದಿದೆ. ಇವು ನಯನ ಮನಮೋಹಕ ದೃಶ್ಯವನ್ನು ಬೀರುತ್ತಿವೆ, ವಿಶ್ವವಿಖ್ಯಾತಿಯನ್ನು ಸಂಪಾದಿಸಿರುವ ಗೋಕಾಕ್ ಜಲಪಾತವು ಬೆಳಗಾವಿ ಜಿಲ್ಲೆಯ ಗೋಕಾಕ್‌ನಲ್ಲಿ ನೋಡಬಹುದಾಗಿದೆ. ಪ್ರಸ್ತುತ ದಿನಗಳಲ್ಲಿ ಪ್ರವಾಸೋದ್ಯಮವು ಆರ್ಥಿಕ ಕ್ಷೇತ್ರಕ್ಕೆ ನೆರವಾಗಿದೆ. ಆದ್ದರಿಂದ ನನ್ನ ಈ ಲೇಖನವನ್ನು ಗೋಕಾಕ್ ಜಲಪಾತ ಕುರಿತು ವಿಶ್ಲೇಷಣಾತ್ಮಕವಾಗಿ ಚರ್ಚಿಸಿ,

**Please cite this article as:** ಸೋಮನಗೌಡ ಮತ್ತು ಎಸ್. ನಾಗರತ್ನಮ್ಮ. (2025). ಬೆಳಗಾವಿ ಜಿಲ್ಲೆಯ ಪ್ರವಾಸೋದ್ಯಮದ ಕೇಂದ್ರವಾಗಿ ಗೋಕಾಕ್ ಜಲಪಾತ: ಒಂದು ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(1), 61–66

ವಿಷಯ ವಸ್ತುವಿನ ಅರಿವಿನೊಂದಿಗೆ ಸಿದ್ಧಪಡಿಸಿರುತ್ತೇನೆ.

**ಸಂಶೋಧನಾ ವಿಧಾನ**

ಈ ಲೇಖನವನ್ನು ಸಿದ್ಧಪಡಿಸಲು ಕ್ಷೇತ್ರಕಾರ್ಯ, ಗ್ರಂಥಗಳ ಪರಾಮರ್ಶೆ ಹಾಗೂ ಪ್ರಾಥಮಿಕ ಮತ್ತು ಆನುಷಂಗಿಕ ಆಧಾರಗಳನ್ನು ಬಳಸಿಕೊಂಡು ಮತ್ತು ವೈಯಕ್ತಿಕವಾಗಿ ವಿಷಯ ವಸ್ತುವಿನ ತಿಳುವಳಿಕೆ ಮಟ್ಟದ ದೃಷ್ಟಿಯಿಂದ ಹಾಗೂ ನನ್ನ ಮಾರ್ಗದರ್ಶಕರೊಂದಿಗೆ ವಿಶ್ಲೇಷಣಾತ್ಮಕವಾಗಿ ಚರ್ಚಿಸಿ ರಚಿಸಿರುತ್ತೇನೆ.

**ಭೌಗೋಳಿಕ ಹಿನ್ನೆಲೆ**

ಕರ್ನಾಟಕದ ರಾಜಧಾನಿಯಾದ ಬೆಂಗಳೂರು ಜಿಲ್ಲೆಯಿಂದ ಸುಮಾರು 507.7 ಕಿ.ಮೀ ವಾಯುವ್ಯಕ್ಕೆ ಬೆಳಗಾವಿ ಜಿಲ್ಲೆಯಿದ್ದು, ಬೆಳಗಾವಿ ಜಿಲ್ಲೆಯಿಂದ ಸರಿಸುಮಾರು 70 ಕಿ.ಮೀ. ಪೂರ್ವಕ್ಕೆ ಗೋಕಾಕ್ ಪಟ್ಟಣವಿದೆ. ಗೋಕಾಕ್ ಒಂದು ತಾಲೂಕು ಕೇಂದ್ರವಾಗಿದ್ದು, ಐತಿಹಾಸಿಕವಾಗಿ ತನ್ನದೇ ಆದ ಪ್ರಾಮುಖ್ಯತೆ ಪಡೆದುಕೊಂಡಿದೆ. ಇದಕ್ಕೆ ಸಾಕ್ಷಿ ಪೂರಕವಾಗಿರುವ ಕಲ್ಯಾಣಿ ಚಾಲುಕ್ಯರ ಕಾಲದ ದೇವಾಲಯಗಳು, ಸ್ಮಾರಕಗಳು, ಶಾಸನಗಳು ಮಾಹಿತಿಯನ್ನು ನೀಡುತ್ತವೆ. ಹಾಗೆಯೇ ಗೋಕಾಕ್ ನಗರ ಜಮಖಂಡಿ ಸಂಸ್ಥಾನ ಕಿತ್ತೂರು ಮತ್ತು ಮರಾಠಿ ಪೇಶ್ವೆಗಳ ಆಡಳಿತಕ್ಕೆ ಒಳಪಟ್ಟಿತ್ತು ಎಂಬುದು ಮಹತ್ತರ ಸಂಗತಿಯಾಗಿದೆ. ಕರ್ನಾಟಕದಲ್ಲಿ ಸಕ್ಕರೆ ಮತ್ತು ಸಿಮೆಂಟ್ ಕಾರ್ಖಾನೆಯನ್ನು ಹೊಂದಿರುವ ತಾಲೂಕು ಕೇಂದ್ರಗಳಲ್ಲಿ ಇದು ಸಹ ಒಂದಾಗಿದೆ. ಗೋಕಾಕ್ ಪಟ್ಟಣದಿಂದ ಸುಮಾರು 6 ಕಿ.ಮೀ ಜಲಪಾತವಿದ್ದು, ಪ್ರೇಕ್ಷಕರಿಗೆ ಸಾರಿಗೆ–ಸಂಪರ್ಕದ ವ್ಯವಸ್ಥೆಗಳನ್ನು ಕಲ್ಪಿಸಿಕೊಡಲಾಗಿರುತ್ತದೆ.

**ಗೋಕಾಕ್ ಜಲಪಾತ**

ಬೆಳಗಾವಿ ಜಿಲ್ಲೆಯಿಂದ 70ಕಿ.ಮೀ ಮತ್ತು ಬೆಂಗಳೂರು ಜಿಲ್ಲೆಯಿಂದ 557.9 ಕಿಮೀ ಅಂತರದಲ್ಲಿದೆ. ಗೋಕಾಕ್ ನಗರ ಖರದಂಟಿಗೆ ಎಷ್ಟು ಪ್ರಸಿದ್ಧಿಯೋ ಅಷ್ಟೇ ಪ್ರಸಿದ್ಧವಾದ ಜಲಪಾತವಾಗಿದ್ದು, ಇದು ಘಟಪ್ರಭಾ ನದಿಯಿಂದ ಉದ್ಭವಿಸಿದೆ. ಈ ನದಿಯು ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಪಶ್ಚಿಮ ಘಟ್ಟದಲ್ಲಿ ಸುಮಾರು 884.ಮೀ. ಎತ್ತರದಲ್ಲಿ ಉಗಮಿಸಿ, ಪೂರ್ವಕಡೆ ಹರಿದು ಬೆಳಗಾವಿ ಜಿಲ್ಲೆಯನ್ನು ಪ್ರವೇಶಿಸುವುದು. ಹೀರಣ್ಯಕೇಶಿ ಮತ್ತು ಮಾರ್ಕಂಡೇಯ ಎಂಬ ಉಪನದಿಗಳು ಈ ನದಿಯನ್ನು ಸೇರುತ್ತವೆ. ಘಟ್ಟಪ್ರಭಾ ನದಿಯು ಮುಂದುವರೆದು ಬಾಗಲಕೋಟೆಯ ಮೂಲಕ ಹರಿದು ಆಲಮಟ್ಟಿಯ ಹತ್ತಿರ ಕೃಷ್ಣಾನದಿಯನ್ನು ಸೇರುತ್ತದೆ. ಘಟಪ್ರಭಾ ನದಿಗೆ ನೀರಾವರಿ ಉದ್ದೇಶದಿಂದ ಬೆಳಗಾವಿ ಜಿಲ್ಲೆ ಗೋಕಾಕ್ ಬಳಿ ಹಿಡಕಲ್ ಜಲಾಶಯವು ನಿರ್ಮಿತವಾಗಿದೆ[1].

ಬೆಳಗಾವಿ ಜಿಲ್ಲೆಯ ಗೋಕಾಕ್ ಜಲಪಾತವು ಮಳೆಗಾಲದಲ್ಲಿ ಮೈದುಂಬಿ ಹರಿದು ರವಣೀಯ ಪ್ರಾಕೃತಿಕ ದೃಶ್ಯಾವಳಿಯನ್ನು ಸವಿಯಲು ಮನಮೊಹಕವಾಗಿರುತ್ತದೆ. ಆದ್ದರಿಂದಾಗಿ ಕರ್ನಾಟಕದಲ್ಲಿ ಅತ್ಯಂತ ಪ್ರಸಿದ್ಧ ಪ್ರವಾಸಿ ತಾಣ ಗೋಕಾಕ್ ಜಲಪಾತವಾಗಿದೆ. ಪ್ರೇಕ್ಷಕರು, ಸೌಂದರ್ಯ ಭರಿತವಾದ ಜಲಪಾತವನ್ನು ನೋಡುತ್ತ, ಅಲ್ಲಿ ಸಿಗುವಂತ ಖರದಂಟಿನ ಸವಿರುಚಿಯನ್ನು ಸವಿಯುತ್ತ ಆನಂದಿಸುತ್ತಾರೆ. ಗೋಕಾಕ್ ಮುಂಗಾರು ಬಂತೆಂದರೆ ಜಲಪಾತವು ಸೌಂದರ್ಯ ತುಂಬಿಕೊಂಡು ಹರಿಯುವ ಮನಮೋಹಕ ದೃಶ್ಯವು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತದೆ. ವರ್ಷದ ಜೂನ್ ತಿಂಗಳಿಂದ ಡಿಸೆಂಬರ್ ತಿಂಗಳವರೆಗೂ ನೀರಿನ ರಭಸದಿಂದ ಬರುವ ಶಬ್ದ ಕೇಳಲು ಕಿವಿಗೆ ಆಹ್ಲಾದವನ್ನುಂಟು ಮಾಡಿದ್ದಲ್ಲದೆ, ಆಧುನಿಕ ಜಗತ್ತಿನಲ್ಲಿ ಕೆಲಸ ಕಾರ್ಯದ ನಿಮಿತ್ತ ವೈಯಕ್ತಿಕ ಖುಷಿ ಅಥವಾ ಸಂತೋಷವನ್ನು ಮರೆತು ಹೋದ ಜನರಿಗೆ ಮರುಳಿ ನಿಸರ್ಗದೊಂದಿಗೆ ಸಂಪರ್ಕ ಬೆಳೆಸಿ, ನಿಶ್ಚಿಂತೆಯಿಂದ

[1] ರಂಗನಾಥ,2024, ಕರ್ನಾಟಕ ಪ್ರಾದೇಶಿಕ ಭೂಗೋಳಶಾಸ್ತ್ರ, ವಿದ್ಯಾನಿಧಿ ಪ್ರಕಾಶನಗದಗ, ಪುಟಸಂಖ್ಯೆ–46

ಸಂತೋಷವನ್ನು ಸಂಭ್ರಮಿಸುತ್ತ, ಮಕ್ಕಳಂತೆ ಮನಸ್ಸಿನ ಭಾರ ಕಡಿಮೆ ಮಾಡಿಕೊಂಡು ಪರಿಸರದೊಂದಿಗೆ ಬೆರೆಯುವದರಿಂದ ಉಲ್ಲಾಸ–ಉತ್ಸಾಹ ಹೊರ ಹೊಮ್ಮಿ ನವಚೈತನ್ಯವು ಹೊಸತನ್ನು ಆವರಿಸಿಕೊಂಡು, ಆರೋಗ್ಯಕರವಾದ ಶುದ್ಧ ಗಾಳಿಯು ಮಾನವ ಜೀವಿಯನ್ನು ಕ್ರಿಯಾಶೀಲನಾಗುವಂತೆ ಮಾಡುತ್ತದೆ. ಹಾಗಾಗಿ ಪರಿಸರ ಪ್ರವಾಸೋದ್ಯಮವು ಕೇವಲ ಖುಷಿ/ಸಂತೋಷವನ್ನು ಮಾತ್ರ ನೀಡುವುದಲ್ಲದೆ, ಪ್ರವಾಸಿಗರಿಗೆ ಆರೋಗ್ಯದ ವೃದ್ಧಿಯೊಂದಿಗೆ ದೈಹಿಕವಾಗಿ ಬಲಿಶಾಲಿಯಾಗುವಂತೆ ಮಾಡುತ್ತದೆ.

ಘಟಪ್ರಭಾ ನದಿಯಿಂದ ಉಂಟಾಗುವ ಈ ಜಲಪಾತವು ಅಮೆರಿಕದ ನಯಾಗರ ಜಲಪಾತವನ್ನು ಹೋಲುತ್ತಿರುವುದರಿಂದಾಗಿ ಇದನ್ನು 'ಭಾರತದ ನಯಾಗರ' ಎಂದು ಕರೆಯಲ್ಪಟ್ಟಿದೆ. ಘಟಪ್ರಭಾ ನದಿಯ ದೀರ್ಘ ಮಾರ್ಗದ ಬಂಡೆಗಳನ್ನು ಹಾಯುತ್ತಾ 170 ಅಡಿ ಎತ್ತರದ ಕಲ್ಲು ಕಣಿವೆಯಲ್ಲಿ ಹರಿದು ಧುಮುಕುವ ಜಲಧಾರೆಯ ನೋಟ ರುದ್ರರಮಣೀಯವಾಗಿದೆ[2]. ರಭಸವಾಗಿ ಹರಿಯುವ ನೀರಿನ ಬಣ್ಣದಪ್ಪ, ಕೆಂಪು ಮತ್ತು ಕಂದು ಬಣ್ಣಗಳಿಂದ ಕೂಡಿದ್ದು ಪ್ರವಾಸಿಗರನ್ನು ಆಕರ್ಷಿಸುತ್ತದೆ. ಹಾಗೆಯೇ ಕಣಿವೆಯಲ್ಲಿನ ನೊರೆಯು ಅರಳೆಯ ಉಂಡೆಯಂತೆ ಮೇಲೇಳುತ್ತದೆ. ಜಲಪಾತವು ರಭಸವಾಗಿ ಹರಿಯುವುದರಿಂದ ತುಂತುರು ಹನಿಗಳಿಂದ ಉಂಟಾಗುವ ಕಾಮನ ಬಿಲ್ಲುಗಳನ್ನು ಕಲಾವಿದರು ನಾನಾ ರೀತಿಯಲ್ಲಿ ವರ್ಣಿಸುತ್ತಾರೆ. ಕೆಂಪು ಮರಳು ಕಲ್ಲಿನಗುಡ್ಡದ ಮೇಲಿಂದ ಕೆಳಗೆ ಧುಮುಕುವ ದೃಶ್ಯರುದ್ರರಮಣೀಯವಾಗಿದ್ದು, ಜನರನ್ನು ಆಕರ್ಷಿಸುವುದರ ಜೊತೆಗೆ ವಿದ್ಯುತ್ ಶಕ್ತಿಯನ್ನು ಸಹ ಉತ್ಪಾದನೆ ಮಾಡಲಾಗುತ್ತದೆ. ಸುಮಾರು 180 ಮೀಟರ್ಎತ್ತರದಿಂದ ಕೆಳಗೆ ಧುಮುಕಿ ಮಡುವಿಗೆ ಸೇರುತ್ತದೆ. ಬೋರ್ಗರೆದು ಕೆಳಗೆ ಹರಿವಯುವ ಸಂದರ್ಭದಲ್ಲಿ ಮಾರ್ಕಂಡೇಯ ನದಿ ಘಟಪ್ರಭಾವನ್ನು ಕೂಡುವುದು, ಸಂಗಮ ಸ್ಥಳದಲ್ಲಿ ವೇಗವಾಗಿ ಹರಿಯುತ್ತದೆ.

ಗೋಕಾಕ್ ಜಲಪಾತ 180 ಮೀಟರ್ ಎತ್ತರದಿಂದ ಬೀಳುವ ನೀರಿನಿಂದ ವಿದ್ಯುತ್ ಶಕ್ತಿಯನ್ನು ಉತ್ಪಾದಿಸುವ ಕಾರ್ಯವು 1887ರಿಂದ ಪ್ರಾರಂಭವಾಯಿತು. 1898ರಲ್ಲಿ ಬ್ರಿಟಿಷ್ ಗೋಕಾಕ್ ನಲ್ಲಿಗಿರಣಿ ಬಟ್ಟೆಯ ಕಾರ್ಖಾನೆ ಅಥವಾ ಕೈಗಾರಿಕೆಯನ್ನು ಪ್ರಾರಂಭಿಸಿದರು. ಜಲಪಾತರಭಸವಾಗಿ ಹರಿಯುವ ನೀರಿಗೆ ದೊಡ್ಡ ದೊಡ್ಡ ಚಕ್ರಗಳನ್ನು ಅಡ್ಡವಾಗಿ ನಿರ್ಮಿಸಿ ಅವುಗಳ ನೀರಿನ ಸಹಾಯದಿಂದ ತಿರುಗತೊಡಗಿದವು ಹೀಗೆ ವಿದ್ಯುತ್ತನ್ನು ಉತ್ಪಾದಿಸಲು ಪ್ರಾರಂಭಿಸಿದರು. ಘಟಪ್ರಭಾ ಜಲಪಾತವು ಕೇವಲ ಪ್ರವಾಸಿಗರ ತಾಣವಾಗದೆ, ಶತಮಾನಕ್ಕಿಂತ ಪೂರ್ವದಲ್ಲಿ ಜಲದಾರೆಯನ್ನು ಕೊಳವೆ ಮೂಲಕ ಹರಿಯುವ ಹಾಗೆ ಮಾಡಿ, ಎರಡು ವಿದ್ಯುತ್ ಉತ್ಪಾದನಾ ಘಟಕಗಳ ಮೂಲಕ ನೂಲು ಗಿರಣಿಗಳಿಗೆ ವಿದ್ಯುತ್ ಪೂರೈಕೆಯಾಗುವುದರೊಂದಿಗೆ, ನಾಡಿನ ಪ್ರಥಮ ವಿದ್ಯುತ್ ಉತ್ಪಾದನೆ ಕೇಂದ್ರವೆಂಬ ಹೆಮ್ಮೆ ತನ್ನದಾಗಿಸಿಕೊಂಡಿದೆ[3]. ಈ ನೂಲಿನ ಗಿರಣಿಯು ನಾಡಿನ ಔದ್ಯೋಗಿಕ ಕ್ಷೇತ್ರದ ಸಾಧನೆಯ ಮೈಲಿಗಲ್ಲು, ಈ ವಿದ್ಯುತ್ ಉತ್ಪಾದಿಸುವ ಸ್ಥಳ ಸಂದರ್ಶಿಸಲು ತಂತಿ ಹಗ್ಗದ ಮೇಲೆ ಚಲಿಸುವ ಟ್ರಾಲಿಯಿದೆ. ಅದರಂತೆ ಪಕ್ಕದಲ್ಲಿ ಸಾಗಲು ಮೆಟ್ಟಿಲುಗಳಿವೆ. ಈ ಮೆಟ್ಟಿಲುಗಳಿಂದ ಸಾಗಬೇಕಾದರೆ ಮಳೆಗಾಲದಲ್ಲಿ ಪಾಚಿ ಕಟ್ಟಿಕೊಂಡಿರುವ ಕಾರಣ ಕಾಲು ಜಾರುವ

---

2 ದೇವರಾಜ್.ಎಸ್ 2012, ಕರ್ನಾಟಕ ಪ್ರವಾಸಿ ತಾಣಗಳು, ಆ್ಯಪ್‌ಪ್ರಿಂಟ್ಸ್ಅಂಡ್ ಪಬ್ಲಿಷರ್ಸ್, ಬೆಂಗಳೂರು. ಪುಟ ಸಂ.

3 ಸೂರ್ಯನಾಥ್ಕಾಮತ್ (ಇ) 1987, ಗವರ್ನಮೆಂಟ್ಆಫ್ಕರ್ನಾಟಕ ಸ್ಟೇಟ್ಗೆಜಿಟಿಯರ್ ಬೆಳಗಾಂ ಡಿಸ್ಟ್ರಿಕ್ಟ್, ಪ್ರಿಂಟೆಡ್ ಬೈ ವಿ.ಬಿ.ಸೂಭಿಯಲ್ ಮತ್ತು ಸನ್ಸ್ಗೌರಿಶಂಕರ್. ಪುಟ ಸಂ:882

ಸಾಧ್ಯತೆಗಳಿರುತ್ತವೆ. ಹಾಗಾಗಿ ಜಾಗರೂಕತೆಯಿಂದ ರಕ್ಷಕರ ಸಲಹೆಯ ಮೇರೆಗೆ ಸಾಗಬೇಕಾಗುತ್ತದೆ.

ಗೋಕಾಕ್ ಜಲಪಾತವನ್ನು ವೀಕ್ಷಿಸಲು ಮೇಲ್ಭಾಗಕ್ಕೆ ಸಮೀಪದಲ್ಲಿ 1890 ರಲ್ಲಿ ಬ್ರಿಟಿಷರು ನಿರ್ಮಿಸಿದ 211 ಮೀಟರ್ ಉದ್ದದ ತೂಗು ಸೇತುವೆಯನ್ನು ನೋಡಬಹುದಾಗಿದೆ. ಘಟಪ್ರಭಾ ನದಿಯು ತುಂಬಿ ರಭಸವಾಗಿ ಹರಿಯುವ ಸಂದರ್ಭದಲ್ಲಿ ಈ ಸೇತುವೆ ಮೇಲೆ ನಡೆದಾಡಿದರೆ ಜೋಕಾಲಿಯಲ್ಲಿರುವ ಜಲಪಾತದಲ್ಲಿ ತೇಲುವ ಅನುಭವವಾಗುತ್ತದೆ. ಹಾಗೆಯೇ ಈ ತೂಗು ಸೇತುವೆಯ ಮುಖಾಂತರ ನದಿಯನ್ನು ವೀಕ್ಷಿಸುವಾಗ ಅದ್ಭುತ ಅಮೋಘ ಭಯ ಖುಷಿ ಹೀಗೆ ಇನ್ನಿತರ ಆಶ್ಚರ್ಯಕರ ಅನುಭವಗಳನ್ನು ಪಡೆಯುತ್ತೇವೆ. ಈ ಸಂದರ್ಭದಲ್ಲಿ ಕೆಲವರು ನಡೆದಾಡಲು ಭಯಭೀತರಾಗಿ ತೂಗು ಸೇತುವೆ ಮೇಲೆ ಹೋಗುವುದನ್ನು ನಿಲ್ಲಿಸಿ ಬಿಡುತ್ತಾರೆ. ಸಾಹಸಿ ಪ್ರವಾಸಿಗರ ಧೈರ್ಯಮಾಡಿ ಮುನ್ನುಗ್ಗಿ ಅನೇಕ ರೋಮಾಂಚಕರ ಅನುಭವಗಳನ್ನು ಪಡೆಯುತ್ತಾರೆ. ಈ ಸೇತುವೆಯನ್ನು 1896 ಸುಮಾರಿಗೆ ಕಲ್ಲಿನದೊಡ್ಡ ಕಮಾನಗಳನ್ನು ನಿರ್ಮಿಸಿ ಈ ಕಲ್ಲಿನ ಕಮಾನುಗಳನ್ನು ಆಧರಿಸಿ 211 ಮೀಟರ್ ಉದ್ದದ ತೂಗು ಸೇತವೆಯನ್ನು ನಿರ್ಮಿಸಲಾಗಿದೆ. ರಸ್ತೆಯ ಪಕ್ಕದ ಕಟ್ಟೆಯನ್ನು ಇಳಿದು ಸೇತುಯತ್ತ ಸಾಗಿದರೆ, ದಂಡೆಯ ಎರಡು ಬದಿಯಲ್ಲಿ ಪ್ರಾಚೀನ ಕಾಲದ ದೇವಾಲಗಳಿವೆ ಇದರಲ್ಲಿ ಮಹಾಲಿಂಗೇಶ್ವರ ದೇವಾಲಯವು ಮಹತ್ವದ್ದಾಗಿದ್ದು, ಬೃಹತ್ ಮಹಾಲಿಂಗೇಶ್ವರ ದೇವಾಲಯವನ್ನು ಸ್ಥಳೀಯವಾಗಿ ವಿವರಿಸಿದಂತೆ ದೇವಾಲಯದಲ್ಲಿ ಕಂಡುಬರುವ ರಟ್ಟ ಮೂರನೇ ಕರ್ತವೀರ್ಯರ 1533 ದಾಖಲೆಯಲ್ಲಿ ತಾರಕೇಶ್ವರ ಎಂದು ಕರೆಯುತ್ತಾರೆ. ಇದು ಚಾಲುಕ್ಯರ ಶೈಲಿಯಲ್ಲಿದ್ದು, ಅನೇಕ ಸುಂದರವಾದ ಕಲಾ ಕೃತಿಗಳನ್ನು ಹೊಂದಿದೆ. ಹಾಗೆಯೇ ಈ ಸೇತುವೆಯನ್ನು ದಾಟಿ ಗುಡ್ಡದ ತುತ್ತತುದಿಯುತ್ತ ಸಾಗಿದಾಗ ವೀಕ್ಷಿಸಲು ನಿರ್ಮಿಸಿದ ವೀಕ್ಷಣಾಲಯದಿಂದ ನಿಂತು ನೋಡಿದರೆ ಆ ಸಿಂಚನ ಮೈಮನವನ್ನು ತೊಯಿಸುವಷ್ಟು ಮನಸ್ಸು ಆಹ್ಲಾದಗೊಳಿಸುತ್ತದೆ.[4]

ಜಲಪಾತದ ಮೇಲೆ ನಿರ್ಮಿಸಿರುವ ಈ ತೂಗು ಸೇತುವೆ ಮೇಲೆ ಒಮ್ಮೆ ಸಾಗುವ ಅವಕಾಶವನ್ನು 25ರಿಂದ 30 ಜನಕ್ಕೆ ಮಾತ್ರ ಪರವಾನಿಗೆ ಇದೆ. ಇದರ ಓಲಾಡುವಿಕೆಯಿಂದ ರಭಸದಿಂದ ಬರುವ ನೀರು ಜನರಿಗೆ ಎರಚುವುದರಿಂದ ಹಲವರು ಭಯಭೀತಿಯಿಂದ ಅರ್ಧಕ್ಕೆ ವಾಪಸ್ಸು ಬರುತ್ತಾರೆ. ಹೀಗೆ ಒಂದಲ್ಲ ಒಂದು ರೀತಿಯಲ್ಲಿ ಪ್ರವಾಸಿಗರ ಮಾನಸಿಕ ಮತ್ತು ದೈಹಿಕ ವೃತ್ತಿಗೆ ಪ್ರವಾಸೋದ್ಯಮವು ಬಹಳ ಉಪಯುಕ್ತವಾಗಿದೆ. ಮೊದಮೊದಲು ವ್ಯಾಪಾರ ಎಂದು ಪ್ರಾರಂಭವಾದ ಪ್ರವಾಸೋದ್ಯಮದ ನಂತರದಲ್ಲಿ ತನ್ನ ಆಯಾಮವನ್ನು ಬದಲಾಯಿಸಿಕೊಂಡಿದೆ. ವೀಕ್ಷಕರು ಮನರಂಜನೆ, ಧಾರ್ಮಿಕತೆ, ಐತಿಹಾಸಿಕತೆ, ಸಾಹಸ ಇನ್ನಿತರ ಪ್ರವಾಸಿಗರು ತಮ್ಮ ಅಭಿರುಚಿಗೆ ತಕ್ಕ ಹಾಗೆ ಪಯಣ ಮಾಡುತ್ತ, ಹೊಸದನ್ನು ಕಲಿಯುವುದರೊಂದಿಗೆ ಪ್ರವಾಸದ ವಿಭಿನ್ನ ಮಜಲುಗಳೊಂದಿಗೆ ಬೆರೆಯುತ್ತಾರೆ.[5]

ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲೂಕಿನಿಂದ 6 ಕಿ.ಮೀ ಅಂತರದಲ್ಲಿರುವ ಜಲಪಾತವನ್ನು ವೀಕ್ಷಿಸಲು ಬರುವಂತಹ ವೀಕ್ಷಕರಿಗೆ ಸಾರಿಗೆ–ಸಂಪರ್ಕ ವ್ಯವಸ್ಥೆ, ವಸತಿ/ಹೋಟೆಲ್‌ಗಳು ಎಲ್ಲಾ ರೀತಿಯ ಮೂಲ ಸೌಕರ್ಯಗಳು ಒದಗಿಸಿಕೊಡಲಾಗುತ್ತದೆ. ಹಾಗೆಯೇ ಪ್ರವಾಸಿಗರಿಗೆ ಯಾವುದೇ ರೀತಿಯಲ್ಲಿ ತೊಂದರೆ ಬರುವುದಿಲ್ಲ ಹಾಗೆ ಜಲಪಾತದ ಹತ್ತಿರ ಉಸ್ತವಾರಿಗಳಿದ್ದು, ಅವರುಗಳು ವೀಕ್ಷಕರಿಗೆ ಮಾರ್ಗದರ್ಶನ ನೀಡುತ್ತಾ ಅಪಾಯದ ಸ್ಥಳಗಳಿಗೆ

[4] ಸೂರ್ಯನಾಥ್‌ಕಾಮತ್. (1987). ಗವರ್ನಮೆಂಟ್ ಆಫ್ ಕರ್ನಾಟಕ ಸ್ಟೇಟ್ ಗೆಜಿಟಿಯರ್ ಬೆಳಗಾಂ ಡಿಸ್ಟ್ರಿಕ್ಟ್, ಪ್ರಿಂಟೆಡ್ ಬೈ ವಿ.ಬಿ.ಸೂಭಿಯಲ್ ಮತ್ತು ಸನ್ಸ್‌ಗೌರಿಶಂಕರ್. ಪುಟ ಸಂ:884,86

[5] ಕ್ಷೇತ್ರಕಾರ್ಯ, ಗೋಕಾಕ್ ಜಲಪಾತ, ದಿನಾಂಕ–27/08/2023

ಹೋಗದಂತೆ ಎಚ್ಚರಿಸುತ್ತಾರೆ. ಹಾಗಾಗಿ ಗೋಕಾಕ್ ಜಲಪಾತವನ್ನು ಪ್ರವಾಸಿಗರ ಭಯರಹಿತವಾಗಿ ಬಂದು ವೀಕ್ಷಿಸಬಹುದೆಂದು ಈ ಮೂಲಕ ಹೇಳಲು ಇಷ್ಟಪಡುತ್ತೇನೆ.

ಗೋಕಾಕ್ ಜಲಪಾತ ಪ್ರವಾಸವು ನೈಸರ್ಗಿಕ ಪ್ರವಾಸೋದ್ಯಮವಾಗಿದ್ದು, ಮನುಷ್ಯನ ಮಾನಸಿಕವಾಗಿ ಸದೃಢವಾಗಲು ಮೌನವಾಗಿರುವ ಆರೋಗ್ಯ ಕಾಪಾಡುವಲ್ಲಿ ಪರಿಸರ ಪ್ರವಾಸೋದ್ಯಮ ತುಂಬಾ ಉಪಯುಕ್ತವಾಗಿದೆ. ಇಂತಹ ಪರಿಸರ ಪ್ರವಾಸೋದ್ಯಮವನ್ನು 'ಇಕೋಟೂರಿಸಂ' ಎಂದುಕರೆಯುತ್ತಾರೆ[6]. ಪ್ರವಾಸಿ ಪ್ರಕೃತಿಯ ಮಡಿಲಲ್ಲಿ ಮಿಂದು ನಿಸರ್ಗ ತಾಣಗಳನ್ನು ಸಂದರ್ಶಿಸಿ ಮರಂಜನೆಯನ್ನು ಪಡೆಯುತ್ತಾನೆ. ಪ್ರಾಕೃತಿಕವಾಗಿ ಸಂಪದ್ಭರಿತವಾದದಟ್ಟ ಅರಣ್ಯಗಳಿಗೆ ಸಂವೇದನಾ ಚಲನಶೀಲತೆಗಾಗಿ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಪ್ರಪಂಚದಲ್ಲಿ ಕುಟುಂಬ, ಕೆಲಸ ಕಾರ್ಯ ಇನ್ನಿತರ ಹಲವಾರು ಕಾರಣಗಳಿಂದಾಗಿ ಮಾನವ ಪ್ರಕೃತಿಯ ಜೊತೆ ಸಂಪರ್ಕವನ್ನು ಕಳೆದುಕೊಳ್ಳುತ್ತಿರುವುದನ್ನು ಪುನಃ ಸ್ಥಾಪಿಸಲು ನಿಸರ್ಗದೊಡನೆ ಬಾಂಧವ್ಯವನ್ನು ಸೃಷ್ಟಿ ಮಾಡುವುದೇ ನೈಸರ್ಗಿಕ ಪ್ರವಾಸೋದ್ಯಮವಾಗಿದೆ.

**ಉಪಸಂಹಾರ**

ಬೆಳಗಾವಿ ಜಿಲ್ಲೆಯ ಗೋಕಾಕ್ ಪಟ್ಟಣವು ಪ್ರವಾಸದ ಆಸಕ್ತಿ ಹೊಂದಿರುವ ಪ್ರೇಕ್ಷಕರಿಗೆ ಹೇಳಿ ಮಾಡಿಸಿರುವ ಸ್ಥಳವಾಗಿದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಗೋಕಾಕ್‌ನಲ್ಲಿ ಜಲಪಾತ ಒಂದಡೆಯಾದರೆ, ಐತಿಹಾಸಿಕ ಸ್ಮಾರಕಗಳು, ದೇವಾಲಗಳು, ನೈಸರ್ಗಿಕ ಆಕರ್ಷಣೆಯ ಸ್ಥಳಗಳು, ಪ್ರಾದೇಶಿಕವಾಗಿ ಪ್ರಸಿದ್ಧಿಯ ತಿನಿಸು ಕರದಂಟು, ಕೈಗಾರಿಕೆಗಳು ಹೀಗೆ ಅನೇಕ ವಿಚಾರದಲ್ಲಿ ಗೋಕಾಕ ಪ್ರಖ್ಯಾತಿಯನ್ನು ಪಡೆದಿದೆ. ಗೋಕಾಕ ಜಲಪಾತವು ಕೇವಲ ಪ್ರವಾಸಿಗರಿಗೆ ಮಾತ್ರ ಸೀಮಿತವಾಗಬಾರದೆಂದು, ಬ್ರಿಟಿಷರು ನೂಲು ಗಿರಣಿ ಕಾರ್ಖಾನೆಯನ್ನು ಸ್ಥಾಪಿಸಿ. ಅದಕ್ಕೆ ವಿದ್ಯುಚ್ಛಕ್ತಿಯ ಅವಶ್ಯಕತೆ ಕಂಡು ಬಂದಿರುವುದರಿಂದ 1887 ರಂದುರಭಸದಿಂದ ಹರಿಯುವ ಘಟಪ್ರಭ ನದಿಯಿಂದ ತಯಾರಿಸಿ, ಕಾರ್ಖಾನೆಗೆ ಪೂರೈಕೆ ಮಾಡಿದರು. ಹೀಗೆ ಅನೇಕ ಅಭಿವೃದ್ಧಿಯ ಕಾರ್ಯಗಳೊಂದಿಗೆ ಬೆಳಗಾವಿ ಜಿಲ್ಲೆಯಲ್ಲಿಯೇ ಗೋಕಾಕ್‌ಒಂದು ಪ್ರವಾಸೋದ್ಯಮದ ಆಯಾಕಟ್ಟಿನ ಸ್ಥಳವಾಗಿದೆ.

**ಆಕರ ಗ್ರಂಥಗಳು**

**ಪ್ರಾಥಮಿಕ ಆಕರಗಳು**

- ಕ್ಷೇತ್ರಕಾರ್ಯ. (2023, ಆಗಸ್ಟ್ 28). *ಗೋಕಾಕ್.*
- ಪ್ರಜಾವಾಣಿ ದಿನಪತ್ರಿಕೆ (2024, ಡಿಸೆಂಬರ್ 26).
- ಸೂರ್ಯನಾಥ್‌ಕಾಮತ್. (1987). *ಗೌರ್ನಮೆಂಟ್ ಆಫ್ ಕರ್ನಾಟಕ ಸ್ಟೇಟ್ ಗೆಜೆಟಿಯರ್ ಬೆಳಗಾಂ ಡಿಸ್ಟ್ರಿಕ್ಟ್.* ವಿ.ಬಿ.ಸೂಭಿಯಲ್ ಮತ್ತು ಸನ್ಸ್‌ಗೌರಿಶಂಕರ್.
- ಶಶಿಕಾಂತ ಆಲಮಪ್ಪ ಬಿಲ್ಲನ (2019). *ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ಪ್ರವಾಸಿ ತಾಣಗಳು ಒಂದು ಐತಿಹಾಸಿಕ ಅಧ್ಯಯನ* (ಪಿಹೆಚ್.ಡಿ ಮಹಾಪ್ರಬಂಧ)

**ಆನುಷಂಗಿಕ ಆಕರಗಳು**

- ದೇವರಾಜ್.ಎಸ್. (2012). *ಕರ್ನಾಟಕ ಪ್ರವಾಸಿ ತಾಣಗಳು.* ಆ್ಯಪ್ ಪಬ್ಲಿಕೇಷನ್ಸ್.
- ಕೃಷ್ಣನ್.ಕೆ.ಕಾಮ್ರ. (2014). *ಟೂರಿಸಂ ದಿ ಅಟ್ರಾಕ್ಷನ್ ಆಕ್ಸೆಸಿಬಿಲಿಟಿ ಅಕಮಂಡೇಷನ್ಸ್ ಅನ್ಸಲರಿ ಸರ್ವಿಸಸ್.* ಕನಿಷ್ಕ ಪಬ್ಲಿಷರ.

[6] ಶಶಿಕಾಂತ ಆಲಮಪ್ಪ ಬಿಲ್ಲನ,2019, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ಪ್ರವಾಸಿ ತಾಣಗಳು ಒಂದು ಐತಿಹಾಸಿಕ ಅಧ್ಯಯನ( ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ) ಪುಟ ಸಂ:25

- ರೋಮಿಲ ಚಾವ್ಲಾ. (2011). *ರಿಸರ್ಚ್ ಮೆತಡ್ಸ ಫಾರ್ ಟ್ರಾವೆಲ್ ಅಂಡ್ ಟೂರಿಸಂ ಇಂಡಸ್ಟ್ರೀ.* ಸೋನಾಲಿ ಪಬ್ಲಿಕೇಷನ್.
- ಸೂರ್ಯನಾಥಕಾಮತ್. (2020). *ಕರ್ನಾಟಕದ ಸಂಕ್ಷಿಪ್ತ ಇತಿಹಾಸ.* ಎಂಸಿಸಿ ಪಬ್ಲಿಕ್ ಪಬ್ಲಿಕೇಷನ್ಸ್.
- ಶಿವರುದ್ರಸ್ವಾಮಿ, ಎಸ್.ಎನ್. (2005). *ಭಾರತೀಯ ಪ್ರವಾಸೋದ್ಯಮ.* ಪೌರಸ್ತ್ಯ ಪ್ರಕಾಶನ.
- ವಿಜಯಲಕ್ಷ್ಮಿ, ಕೆ.ಎಸ್. *ಇತಿಹಾಸ* ಮತ್ತು *ಪ್ರವಾಸೋದ್ಯಮ.* ಕೋರಿ ಪಬ್ಲಿಕೇಷನ್.